# ಧಾರ್ಮಿಕತೆಯ ನೆಪದಲ್ಲಿ ರಾಷ್ಟ್ರೀಯತೆಗೆ ಪೆಟ್ಟು

'ಹೊಸದಿಗಂತ' ದ ಓದುಗರ ಓಲೆ ವಿಭಾಗದಲ್ಲಿ "ಹಿಂದುಗಳಿಗೆ ನೋವಾಗಲಿಲ್ಲವೇ?" ಎಂಬ ಶೀರ್ಷಿಕೆಯಡಿ ಪ್ರಕಟಗೊಂಡಿರುವ ಶ್ರೀ ಕೆ.ಎಂ. ನೈನಾರವರ ಪತ್ರವು, ಭಾರತದ ಅನೇಕ ಮುಸಲ್ಮಾನರೂ, ಸ್ವಾತಂತ್ರ್ಯ ರಾಷ್ಟ್ರೀಯತೆಗಳ ಬಗ್ಗೆ ಯೋಚಿಸುವ ರೀತಿಯನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ. ಇದು ಸಾಮಾನ್ಯ ಭಾರತೀಯ ಮುಸಲ್ಮಾನರ ತಪ್ಪಲ್ಲ. ರಾಷ್ಟ್ರೀಯಮಟ್ಟದಲ್ಲಿ, ಧರ್ಮದ ಹೆಸರಿನಲ್ಲಿ ಕೆಲವು ಮತಾಂಧ ಮೂಲಭೂತವಾದಿ ಮುಸ್ಲಿಂ ನಾಯಕರು, ಸಾಮಾನ್ಯ ಮುಸ್ಲಿಮರ ಈ ಮಾನೋಭಾವಕ್ಕೆಮೂಲಕಾರಣ. ನೈನಾರ ತಮ್ಮ ಪತ್ರಗಳಿಂದ, ಹಿಂದುಗಳನ್ನು ಹೀಗಳೆಯುತ್ತಾ, ಮುಸಲ್ಮಾನರು ಮಾಡುವುದೆಲ್ಲಾ (ಮಾಡಿರುವುದೆಲ್ಲಾ) ಶ್ರೇಷ್ಠವೆಂಬಂತೆ ಸಮರ್ಥಿಸಿಕೊಳ್ಳುತ್ತಾ ಸಾಕಷ್ಟು ವಿವಾದಗಳನ್ನು ಸೃಷ್ಟಿಸಿದ್ದಾರೆ. ಬಹುಸಂಖ್ಯಾತರ ಆಚರಣೆಗಳನ್ನು ಟೀಕಿಸಿ, ಅವರು ಕಾರ್ಯಗಳನ್ನು ನಿಂದಿಸುವ ಇಂತಹ ಧೈರ್ಯ, ಎದೆಗಾರಿಕೆ ಇರಲು ಕೇವಲ ಭಾರತದೇಶದಲ್ಲಿ ಮಾತ್ರ ಸಾಧ್ಯ. ಪಾಕಿಸ್ಥಾನ, ಅರಬ್ ದೇಶಗಳಲ್ಲಿ ಧರ್ಮಾಚರಣೆಯನ್ನು ಪ್ರಶ್ನಿಸುವ ಅಥವಾ ಬ್ರಿಟನ್, ಅಮೇರಿಕಾ ದೇಶಗಳಲ್ಲಿ ಕ್ರೈಸ್ತ ಧರ್ಮಾನುಯಾಯಿಗಳಿಗೆ ನೋವುಂಟುಮಾಡುವ ಯಾವುದೇ ಇಂತಹ ಕಾರ್ಯವನ್ನೂ ಅಲ್ಲಿನ ಸ್ಥಳೀಯರು ಸಹಿಸುವುದಿಲ್ಲ. ಹಾಗೇನಾದರೂ ಮಾಡಿದಲ್ಲಿ ಅವರು ಸಾರ್ವಜನಿಕ ಶಿಕ್ಷೆಗೆ ಗುರಿಯಾಗುವುದಂತೂ ಖಂಡಿತ. ಆದರೆ ಭಾರತದೇಶದಲ್ಲಿ ಮೃದುಸ್ವಭಾವದ ಅತಿ ಸಹನಶೀಲರಾದ ಹಿಂದುಗಳು ಹಾಗೂ ಕೇವಲ ಓಟಿನ ಆಸೆಗಾಗಿ ದೇಶವನ್ನೇ ಮಾರಲೂ ಸಿದ್ಧವಿರುವ ನಮ್ಮ ಭ್ರಷ್ಟ ಸರ್ಕಾರಗಳ ಕೃಪಾಕಟಾಕ್ಷದಿಂದ ಶಹಾಬುದ್ದೀನ್, ನೈನಾರಂತಹ ಮೂಲಭೂತವಾದಿಗಳು ಸೊಲ್ಲೆತ್ತುತ್ತಲೆ ಇರುತ್ತಾರೆ. ಆದರೆ ಜನಸಾಮಾನ್ಯರಲ್ಲಿ ವಿಷದ ಬೀಜವನ್ನು ಬಿತ್ತುವ ಇಂತಹ ಅರೆಪ್ರಜ್ಞಾವಂತರಿಗೆ ಸರಿಯಾದ ಬುದ್ಧಿವಾದ, ನಿಜಾಂಶ ತಿಳಿಸುವುದು ಪ್ರತಿಯೊಬ್ಬ ಸ್ವಾಭಿಮಾನಿ ಭಾರತೀಯನ ಆದ್ಯ ಕರ್ತವ್ಯ.

ಹಿಂದುಗಳೊಂದಿಗೆ ಸಾಮರಸ್ಯದಿಂದ ಜೀವನ ನಡೆಸಲು ಭಾರತೀಯ ಮುಸ್ಲಿಮರಿಗೆ ಸ್ವಾತಂತ್ರ್ಯಾನಂತರ ಅನೇಕ ಅವಕಾಶಗಳು ದೊರೆತಿವೆ. ಆದರೆ ಇವೆಲ್ಲವನ್ನೂ ಅವರು, ತಮ್ಮ ಧರ್ಮದ ಶ್ರೇಷ್ಠತೆಗೆ ಎಲ್ಲಿ ಕುಂದು ಬರುವುದೋ ಎಂಬ ಕಾರಣದಿಂದ ದೂರತಳ್ಳಿದ್ದಾರೆ. ವಂದೇ ಮಾತರಂ ಗೀತೆ ಹಾಡುವುದರಿಂದ ಮುಸ್ಲಿಮರ ಏಕಮೇವ ಸಿದ್ಧಾಂತಕ್ಕೆ ಚ್ಯುತಿಯುಂಟಾಗುತ್ತದಂತೆ. ಭಾರತದೇಶವನ್ನು ಮಾತೃಭೂಮಿಯೆಂದು ಪರಿಗಣಿಸುವ ಭಾರತೀಯರು ಭಾರತಮಾತೆಗೆ ವಂದಿಸುವ ಈ ಗೀತೆಯ, ಮುಸ್ಲಿಮರಿಗೆ ಅಪ್ರಿಯವಾಗುವುದಾದರೆ, ಅವರಿಗಿಂತ ಹೆಚ್ಚಿನ ದೇಶದ್ರೋಹಿಗಳು ಬೇರೊಬ್ಬರಿಲ್ಲ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ವಾತಂತ್ರ್ಯಯೋಧರಿಗೆ ಸ್ಫೂರ್ತಿಯ ಸೆಲೆಯಾಗಿದ್ದ 'ವಂದೇ ಮಾತರಂ' ನಮ್ಮ ರಾಷ್ಟ್ರಗೀತೆಯಾಗಬೇಕಿತ್ತು. ಆದರೆ ಮುಸ್ಲಿಮರನ್ನು ಓಲೈಸೋಸುಗ ಅಂದಿನ ನೆಹರೂ ನೇತೃತ್ವದ ಸರ್ಕಾರವು, ಇಂಗ್ಲೆಂಡ್ ದೊರೆ ಜಾರ್ಜ್ ರನ್ನು ಸ್ತುತಿಸುವ 'ಜನಗಣಮನ' ವನ್ನು ರಾಷ್ಟ್ರಗೀತೆಯಾಗಿ ಸ್ವೀಕರಿಸಿತು. ವಿದೇಶೀ ದೊರೆಯನ್ನು ಹೊಗಳುವ, ಗುಲಾಮಗಿರಿಯ ಸಂಕೇತವಾಗಿರುವ ಈ ಗೀತೆಯನ್ನು ಹಾಡುವುದು, ಮುಸ್ಲಿಮರು, ರಾಷ್ಟ್ರಕ್ಕೆ ಗೌರವ ಸಲ್ಲಿಸಿದಂತೆಯೇ? ಅಥವಾ ಪಾಕಿಸ್ತಾನಿ ಬರಹಗಾರನೊಬ್ಬ ಬರೆದ 'ಸಾರೆ ಜಹಾಸೆ ಅಚ್ಚಾ' ಗೀತೆಯನ್ನು ಹಾಡುವುದು ತಮ್ಮ ದೇಶಪ್ರೇಮವನ್ನು ಸೂಚಿಸುದಂತಾಗುತ್ತದೆಯೇ ೧೯೪೬ರಲ್ಲಿ ಜಿನ್ನಾ ನೇತೃತ್ವದ ಮುಸ್ಲಿಂಲೀಗ್, ಪ್ರತ್ಯೇಕ ಮುಸ್ಲಿಂ ದೇಶವನ್ನು ಸ್ಥಾಪಿಸುವ ಸಲುವಾಗಿ ಭಾರತೀಯ ಮುಸ್ಲಿಮರ ಅಭಿಪ್ರಾಯವನ್ನು ಸಂಗ್ರಹಿಸಿದಾಗ ಶೇ ೯೬ರಷ್ಟು ಮಂದಿ ಮುಸ್ಲಿಂ ರಾಷ್ಟ್ರಕ್ಕೆ ಬೆಂಬಲ ನೀಡಿದ್ದು ಬಹುಶ: ನೈನಾರರಿಗೆ ಗೊತ್ತಿರಲಿಕ್ಕಿಲ್ಲ. ತಾವೇ ಭಾರತದೇಶವನ್ನು ವಿಭಜಿಸಲು ಒಪ್ಪಿ ಪಾಕಿಸ್ತಾನವನ್ನು ಮಾಡಲು ಹೊರಟು, ನಂತರ ಅನೇಕ ಮುಸಲ್ಮಾನರು ಇಲ್ಲೇ ಉಳಿದು ಇಲ್ಲಿನ ಸರ್ವ ಸವಲತ್ತುಗಳನ್ನೂ, ಸಹಾನುಭೂತಿಯನ್ನೂ ಅನುಭವಿಸುತ್ತಿದ್ದಾರೆ. ಇನ್ನು ವಿಭಜನೆಯಿಂದ ಮುಸ್ಲಿಮರಿಗೆ ನೋವಾಗಿದೆ ಎಂದು ಹೇಳುವುದು ತೀರಾ ಹಾಸ್ಯಾಸ್ಪದವಾಗಿದೆ.

ಬಹುಶ: ಕ್ರೀಡಾಮನೋಭಾವದ ಬಗ್ಗೆ ನೈನಾರರಿಗೆ ಯಾವುದೇ ಜ್ಞಾನವಿದ್ದಂತಿಲ್ಲ. ಒಳ್ಳೆಯ ಕ್ರೀಡಪ್ರದರ್ಶನಕ್ಕೆ ಯಾವುದೇ ದೇಶದಲ್ಲೇ ಆದರೂ ಮನ್ನಣೆಯಿದೆ. ಕ್ರೀಡಾಪ್ರೇಕ್ಷಕರು ಇಂತಹದನ್ನು ಮೆಚ್ಚುತ್ತಾರೆ. ಆದರೆ ತಮ್ಮದೇ ದೇಶ ಸೋಲುಂಡು ಬೇರೊಂದು ದೇಶ ವಿಜಯಸಾಧಿಸಿದಾಗ ಪಟಾಕಿ ಸಿಡಿಸಿ, ಕುಣಿದು ಕುಪ್ಪಳಿಸುವುದು ಯಾವುದೇ ದೇಶಾದಲ್ಲೂ ಆಚರಣೆಯಲ್ಲಿ ಇಲ್ಲ. ಇಂತಹ ಪ್ರವೃತ್ತಿ ಕ್ರೀಡೆಗೆ ಪ್ರೋತ್ಸಾಹ ಎಂದು ಕರೆಸಿಕೊಳ್ಳುವುದಿಲ್ಲ. ಆದರೆ ದೇಶದ್ರೋಹದ ಮುಕ್ತಪ್ರದರ್ಶನವಾಗುತ್ತದೆ.

ಸುಮಾರು ೫೦ ವರ್ಷಗಳಿಂದ ಉಪಯೋಗಿಸದೇ ಬಿಟ್ಟಿದ್ದ ಒಂದು ಕಟ್ಟಡವು ಒಮ್ಮೆಲೆ ಮುಸ್ಲಿಮರಿಗೆ ಆರಾಧನಾ ಮಸೀದಿ(ಅಲ್ಲಾ ಹು ಭವನ)ಯಾದದ್ದು ಆಶ್ಚರ್ಯಕರ. ಭಾರತೀಯ ಮುಸ್ಲಿಮರಿಗೆ ಕಿಂಚಿತ್ತಾದರೂ ದೇಶಪ್ರೇಮವಿದ್ದರೆ ಅವರು ವಿಷ್ಣು ದೇವಾಲಯವಾಗಿದ್ದ ಇಲ್ಲಿನ ಕಟ್ಟಡದ ಮೇಲಿನ ಅಧಿಕಾರವನ್ನು ತ್ಯಜಿಸಿ, ಹಿಂದುಗಳಿಗೆ ನೀಡಿ ಉತ್ತಮ ಸಹಬಾಳ್ವೆ ನಡೆಸಬಹುದಿತ್ತು ಆದರೆ ದಾಳಿಕೋರ ಬಾಬರನೇ ಇವರಿಗೆ ಶ್ರೇಷ್ಠನೆನಿಸಿದನು. ಮರ್ಯಾದಾ ಪುರುಷೋತ್ತಮ ಶ್ರೀರಾಮನು ಇವರಿಗೆ ವೈರಿಯಾದನು. ಹಳೆಯ ಕಟ್ಟಡವಾದ ಬಾಬರಿ ಕಟ್ಟಡವು ಉರುಳಿದ್ದುದರಿಂದ ಮುಸ್ಲಿಮರಿಗೆ ನೋವಾಗಿದ್ದರೆ, ನೂರಾರು ದೇವಾಲಯಗಳನ್ನು ಗ್ರಂಥಭಂಡಾರಗಳನ್ನು ಮತಾಂಧ ಮುಸಲ್ಮಾನರು ನಾಶಪಡಿಸಿದಾಗ ಹಿಂದುಗಳಿಗೆ ಆತ್ಮಾನಂದವಾಗಿತ್ತೆಂದು ಭಾವಿಸಿದ್ದಾರೇನೋ ಈ ಮಹಾಶಯರು.

ಯಾವುದೋ ಒಂದು ಗಲ್ಲಿಯಲ್ಲಿ ಮಸೀದಿಯಿದ್ದಾಕ್ಷಣ ಅಲ್ಲಿ ಹಿಂದು ದೇವರ ಉತ್ಸವವನ್ನು ತರಬಾರದೆಂದು ತಡೆಯುವುದು, ಮುಸ್ಲಿಮರಿಗೆ ಸಾಮರಸ್ಯ ಜೀವನದಲ್ಲಿ ಇಚ್ಛೆಯಿಲ್ಲದಿರುವುದನ್ನು ಪ್ರದರ್ಶಿಸುತ್ತದೆ. ಹುಬ್ಬಳ್ಳಿಯ ಇದ್ಗಾ ಮೈದಾನ ಮುಸ್ಲಿಮರ ಸ್ವತ್ತಲ್ಲ. ಆದರೆ ಅದು ನಗರ ಸಭೆಯ ಸ್ವತ್ತು ಎಂಬುದು ಎಲ್ಲರಿಗೂ ಗೊತ್ತಿದ್ದರೂ, ನೈನಾರಂತಹವರು ಅದು ಮುಸ್ಲಿಮರ ಆಸ್ತಿಯೆಂದು ಮಾತನಾಡುತ್ತಾರೆ. ಅದು ಮುಸ್ಲಿಮರದ್ದೇ ಆಸ್ತಿಯೆಂದಿಟ್ಟುಕೊಳ್ಳೋಣ, ಅಲ್ಲಿ ರಾಷ್ಟ್ರಧ್ವಜ ಹಾರಿಸುವುದರಿಂದ ಮುಸ್ಲಿಮರು ತಮ್ಮ ದೇಶಪ್ರೇಮ ತೋರಿಸಿದಂತಾಗುವುದಿಲ್ಲವೇ ?

ಕಾಶ್ಮೀರದ ಇಂದಿನ ಪರಿಸ್ಥಿತಿಗೆ ಪಾಕಿಸ್ಥಾನೀಯರು ಮಾಡುತ್ತಿರುವ ಕುತಂತ್ರ ಹಾಗೂ ಭಾರತೀಯ ಮುಸ್ಲಿಮರು ಈ ಕುತಂತ್ರಕ್ಕೆ ನೀಡುತ್ತಿರುವ ಸಹಕಾರವೇ ಕಾರಣವಾಗಿದೆ. ೩ ಲಕ್ಷ ಹಿಂದುಗಳಾನ್ನು ಕಾಶ್ಮೀರದಿಂದ ಓಡಿಸಿದಾಗ ಅವರಿಗೆ ಆಕ್ರೋಶವಿರಲಿಲ್ಲವೆಂದೇ ? ಕೇವಲ ಒಬ್ಬ ಮುಸಲ್ಮಾನ ಸಂಸಾರಕ್ಕೆ ನೋವುಂಟಾಯಿತು ಎಂಬ ಕಾರಣಕ್ಕೆ ಅವನು ಅಸ್ತ್ರ ಹಿಡಿಯುವಂತಾದರೆ ಈ ೩ ಲಕ್ಷ ಹಿಂದುಗಳು ಯುದ್ಧವನ್ನೇ ಮಾಡಬೇಕಾಗಿತ್ತಲ್ಲವೇ? ಪ್ರತ್ಯೇಕತಾವಾದಕ್ಕೆ ಬೆಂಬಲವನ್ನು ಸೂಚಿಸುವ ಇಂತಹ ದೇಶೀಯರನ್ನು ಏನೆಂದು ಕರೆಯಬೇಕು.

ಪತ್ರದಲ್ಲಿ ಅನೇಕಬಾರಿ ಕೆಲವು ‘ಸ್ವಾರ್ಥಿ ಜಾತಿಯ ಪಕ್ಷ’ಗಳನ್ನು ಟೀಕಿಸಿರುವುದು ನಮಗೆ ಕಾಣುತ್ತದೆ. ಈ ಪಕ್ಷ ಬಿ.ಜೆ.ಪಿ. ಎಂದು ಹೇಳಲು ಭಯವೇಕೆ? ಶ್ರೀನರೇಂದ್ರರು ಇಸ್ಲಾಂ ಧರ್ಮವನ್ನು ತಿಳಿಯಬೇಕಿಲ್ಲ. ಆದರೆ ನೈನಾರರು ಹಿಂದುಗಳ ಬಗ್ಗೆ ಗೌರವ ಸೂಚಿಸುವುದು ಅವಶ್ಯಕ. ಇದು ಅವರಿಗೂ ಇತರ ಮುಸ್ಲಿಮರಿಗೂ ಶ್ರೇಯಸ್ಕರ. ಮೇಲೆ ಪಟ್ಟಿಮಾಡಿರುವ ಎಲ್ಲಾ ದೇಶದ್ರೋಹಿ ಕಾರ್ಯಗಳಿಗಾಗಿ, ಯಾರಿಗೆ ಸೊಂಟಕ್ಕೆ ಕಲ್ಲು ಕಟ್ಟಿ ಸಮುದ್ರಕ್ಕೆ ಎಸೆಯಬೇಕು ಎಂಬುದನ್ನು ಜನರೇ ನಿರ್ಧರಿಸಬೇಕು. ಪ್ರಪಂಚದ ಯಾವುದೇ ಭಾಗದಲ್ಲಿಯೇ ಆಗಲೀ ಮುಸಲ್ಮಾನರು ಇತರ ಧರ್ಮೀಯರೊಂದಿಗೆ ಸಾಮರಸ್ಯದಿಂದ ಜೀವನ ನಡೆಸಿಲ್ಲ. ಅದು ಭಾರತವಿರಬಹುದು, ಅಜರಬೈಜಾನ್, ಸಾರಯೇವೋ, ಆಫ್ರಿಕಾ ದೇಶಗಳಿರಬಹುದು, ಎಲ್ಲೇ ಆಗಲಿ ಅವರು

ಇತರ ಧರ್ಮೀಯರೊಂದಿಗೆ ಘೋರಯುದ್ಧದಲ್ಲಿ ತೊಡಗಿರುವದನ್ನು ನಾವು ಗಮನಿಸಬಹುದು. ಭಾರತದ ಹಿಂದುಗಳ ವಿಶಾಲ ಹೃದಯ, ಪರಧರ್ಮ ಸಹಿಷ್ಣುತೆ ಹಾಗೂ ಸಹನೆಗಳಿಂದ ಭಾರತದಲ್ಲಿ ಹಿಂದು ಮುಸ್ಲಿಮರು ಇಂದಿಗೂ ಸಾಮರಸ್ಯದಿಂದ ಜೀವನ ನಡೆಸುತ್ತಿದ್ದಾರೆ. ನೈನಾರರಂತಹ ಕೆಲವು ಹಿಂದು ವಿರೋಧಿಗಳು, ಪಾಕಿಸ್ತಾನಿ ಸಮರ್ಥಕರು ತಮ್ಮ ನಿಲುವನ್ನು ಬದಲಿಸಿಕೊಂಡು ಬಾಳುವುದಾದರೆ (ಹಿಂದುಗಳೊಂದಿಗೆ ಸರಿಯಾದ ಸ್ಥಾನಮಾನನೀಡಿ) ಭಾರತದೇಶವು 'ಹೊಸದಿಗಂತ' ದತ್ತ ಮುಂದುವರಿಯುದರಲ್ಲಿ ಸಂಶಯವಿಲ್ಲ.

Feb 24th 1994 Hosa Diganta Dhaarmikateya nepadalli raastriyatege pettu